## 3

ನಾನು ತಾರ್‌ನಾಕದ ರಸ್ತೆಯಲ್ಲಿದ್ದೇನೆ ಜನಸಂದಣಿಯಲ್ಲಿ ನನ್ನ ನಾ ಮರೆತು
ಏಕಾಕಿಯಾಗಿ
ವಾಹನಗಳ ಭರಾಟೆ ಮನುಷ್ಯ ನಿರಾಳವಾಗಿ ನಡೆಯುವ ಜಾಗ ಇದಲ್ಲ
ಇಲ್ಲಿ ಒನ್ – ವೇ ಅಲ್ಲಿ ಇನ್ನೊಂದು ವೇ ಆಕಾಶಮಾರ್ಗವೂ
ಪಾದಚಾರಿಗಳಿಗೆ ಸಲ್ಲ
ಎಷ್ಟು ನಡೆದರೂ ದಾರಿ ಮುಂದೆ ಸಾಗುವುದಿಲ್ಲ
ಈ ತಿರುವಿನಲ್ಲೊಂದು ಪಾರಿಜಾತದ ಗಿಡವಿತ್ತು ಈಗಿಲ್ಲ
(ನನ್ನ ಕಾಲಮಾನವ ಹೀಗೆ ಅಳೆಯುತ್ತ ನಾನು)
ಕರಾವಳಿಯ ದಿಣ್ಣೆ ಕಣಿವೆಗಳಲ್ಲಿ ಓಡಾಡಿದವನು ಈಗ
ಈ ದಕ್ಖಣದ ಪಟ್ಟಣದ ಸಮತಟ್ಟು ಕೃತಕವೆನಿಸುತ್ತಿದೆ ನನಗೆ
ದಾಟುವುದಕ್ಕೊಂದು
ಬೈಪಣೆ ಕೂಡ ಇಲ್ಲ ಹೊಳೆಯಿಲ್ಲ ಬನವಿಲ್ಲ ನಾನು ಪ್ರೀತಿಸಿದ
ಯಾರೂ ಇಲ್ಲ
ಸೂರ್ಯ ಚಂದ್ರರು ಮೂಡದೆ ಕಂತದೆ ಸಂವತ್ಸರಗಳಾದುವು
ಎಲ್ಲೆಲ್ಲು ಕವಿದಿದೆ ಒಂದು ನಿಗೂಢ ಮಬ್ಬು ಬಸ್ಸು ಕಾರುಗಳ ನಳಿಗೆ
ಹೊರ ಹಾಕಿದ ಹೊಗೆ ಮತ್ತು ನರ ವೈಶ್ವಾನರರ ನಿಶ್ವಾಸ
ಉಗಿದ ಇಂಗಾಲಾಮ್ಲ
ಇದಕ್ಕೆಂದೇ ನಾನು ಬಂದುದು ಅಷ್ಟು ದೂರದಿಂದ ಇಲ್ಲಿ
ಇಷ್ಟು ಕಾಲದಿಂದ?



● **ಕೆ.ವಿ. ತಿರುಮಲೇಶ್**

("Dejection: An Ode" ಎನ್ನುವುದು ಕಾಲರಿಜ್‌ನ ಒಂದು ಕವಿತೆ. ತಾನು ಪ್ರೀತಿಸುತ್ತಿದ್ದ ಸಾರಾ ಹಚಿನ್ಸನ್ ಎಂಬವಳಿಗೆ ಪತ್ರವಾಗಿ ಬರೆದುದು; 1802ರಲ್ಲಿ ಕವಿತೆಯ ರೂಪ ಪಡೆಯಿತು. ನಂತರ ಹಲವು ಆವೃತ್ತಿಗಳನ್ನು ಕಂಡಿತು. ಆರಂಭದಲ್ಲಿದ್ದ ವೈಯಕ್ತಿಕ ಉಲ್ಲೇಖಗಳನ್ನು ಕಾಲರಿಜ್ ಕ್ರಮೇಣ ತೊಡೆದು ಹಾಕಿದ. ಸಾರಾ ಹಚಿನ್ಸನ್ ವರ್ಡ್ಸ್‌ವರ್ತ್‌ನ ಹೆಂಡತಿಯಾದ ಮೇರಿ ಹಚಿನ್ಸನ್ನಳ ತಂಗಿ. ಇದೊಂದು ವಿಫಲ ಪ್ರೇಮವಾಗಿತ್ತು: ಕಾಲರಿಜ್ ಈಗಾಗಲೇ ಸಾರಾ ಫ್ರಿಕರ್ ಎಂಬವಳನ್ನು ಮದುವೆಯಾಗಿದ್ದ. ಅವನು ಅಫೀಮ್ ವ್ಯಸನಿಯಾಗಲು ಈ ಪ್ರೇಮನೈರಾಶ್ಯವೂ ಒಂದು ಕಾರಣ ಎನ್ನಲಾಗುತ್ತದೆ)